ಕರ್ನಾಟಕ ಸರ್ಕಾರ

## ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಸಾಸಂಇ : ಉ ನಿ : ಸುಮಪ : 2014–15 : ದಿನಾಂಕ: 25–4–2015

# ಪತ್ರಿಕಾ ಆಮಂತ್ರಣ

| | | | |
|---|---|---|---|
| 1. | ಸಹಕಾರ ಸೌಧದ ಶಂಕುಸ್ಥಾಪನಾ ಸಮಾರಂಭ:<br><br>ಭೂಮಿ ಪೂಜೆ ಹಾಗೂ ಶಂಕುಸ್ಥಾಪನೆ:<br><br>ಶ್ರೀ ಸಿದ್ದರಾಮಯ್ಯ,,<br>ಮುಖ್ಯಮಂತ್ರಿಗಳು,<br><br>ಕಾರ್ಯಕ್ರಮದ ಉದ್ಘಾಟನೆ:<br><br>ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್,<br>ಸಹಕಾರ ಹಾಗೂ ಸಕ್ಕರೆ ಸಚಿವರು.<br><br>ಕಟ್ಟಡದ ನೀಲ ನಕ್ಷೆ ಅನಾವರಣ:<br><br>ಶ್ರೀ ರಾಮಲಿಂಗಾ ರೆಡ್ಡಿ,<br>ಸಾರಿಗೆ ಸಚಿವರು | 27-4-2015<br>ಸೋಮವಾರ<br>ಬೆಳಿಗ್ಗೆ<br>10–00 ಗಂಟೆಗೆ | ಸಹಕಾರ ಸೌಧದ ಆವರಣ,<br>8ನೇ ಅಡ್ಡರಸ್ತೆ,<br>ಮಾರ್ಗೋಸಾ ರಸ್ತೆ,<br>ಮಲ್ಲೇಶ್ವರಂ,<br>ಬೆಂಗಳೂರು – 560 003 |
| 2. | ಪತ್ರಿಕಾಗೋಷ್ಠಿ:<br><br>ಶ್ರೀ ಯು.ಟಿ. ಖಾದರ್, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು | 27-4-2015<br>ಸೋಮವಾರ<br>ಮಧ್ಯಾಹ್ನ<br>12–30 ಗಂಟೆಗೆ | ಕೊಠಡಿ ಸಂಖ್ಯೆ 123,<br>ವಿಕಾಸಸೌಧ,<br>ಬೆಂಗಳೂರು |

ನಿರ್ದೇಶಕರ ಪರವಾಗಿ

# ಪತ್ರಿಕಾ ಪ್ರಕಟಣೆ

# ಸಚಿವರ ಪ್ರವಾಸ

ಬೆಂಗಳೂರು ಏಪ್ರಿಲ್ 25 (ಕರ್ನಾಟಕ ವಾರ್ತೆ)

ಕನ್ನಡ ಮತ್ತು ಸಂಸ್ಕೃತಿ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಖಾತೆ ಸಚಿವೆ ಶ್ರೀಮತಿ ಉಮಾಶ್ರೀ ಅವರು ಏಪ್ರಿಲ್ 6 ರಂದು ಬಾಗಲಕೋಟೆ ಮತ್ತು ಧಾರವಾಡ ಜಿಲ್ಲೆಗಳಲ್ಲಿ ಪ್ರವಾಸ ಮಾಡುವರು.

ಪಹೊ:ಬಾಬು:ಜಿಪಿಆರ್.

## ಮುಖ್ಯ ಸಚೇತಕರ ಪ್ರವಾಸ

ಬೆಂಗಳೂರು ಏಪ್ರಿಲ್ 25 (ಕರ್ನಾಟಕ ವಾರ್ತೆ)

ಕರ್ನಾಟಕ ವಿಧಾನಸಭೆಯ ಸರ್ಕಾರಿ ಮುಖ್ಯ ಸಚೇತಕ ಶ್ರೀ ಅಶೋಕ ಮಹಾದೇವಪ್ಪ ಪಟ್ಟಣ್ ಅವರು ಏಪ್ರಿಲ್ 26 ರಂದು ಬೆಳಗಾವಿ ಜಿಲ್ಲೆಯ ರಾಮದುರ್ಗದಲ್ಲಿ ಪ್ರವಾಸ ಕೈಗೊಂಡು ಏಪ್ರಿಲ್ 27 ರಂದು ನಗರಕ್ಕೆ ಹಿಂದಿರುಗಲಿದ್ದಾರೆ.

ಪಹೊ:ಬಾಬು:ಜಿಪಿಆರ್.

## ಅನಧಿಕೃತ ಪಂಪ್‌ಸೆಟ್‌ಗಳನ್ನು ಮೇ 15 ರ ಒಳಗೆ ಸಕ್ರಮಗೊಳಿಸಿಕೊಳ್ಳಲು ಗಡುವು

## – ಡಿ.ಕೆ. ಶಿವಕುಮಾರ್

ಬೆಂಗಳೂರು ಏಪ್ರಿಲ್ 25 (ಕರ್ನಾಟಕ ವಾರ್ತೆ)

ಅನಧಿಕೃತ ರೈತರ ಪಂಪ್‌ಸೆಟ್‌ಗಳನ್ನು ಸಕ್ರಮಗೊಳಿಸಲು ಮೇ 15 ರವರೆಗೆ ಅವಧಿ ವಿಸ್ತರಿಸಲಾಗಿದೆ ಎಂದು ಇಂಧನ ಸಚಿವ ಶ್ರೀ ಡಿ.ಕೆ. ಶಿವಕುಮಾರ್ ಅವರು ತಿಳಿಸಿದರು.

ವಿಧಾನಸೌಧದ ಸಚಿವರ ಕಚೇರಿಯಲ್ಲಿ ಇಂದು ಭೇಟಿಮಾಡಿದ ಸುದ್ದಿಗಾರರೊಂದಿಗೆ ಮಾತನಾಡಿದ ಸಚಿವರು ಈ ಹಿಂದೆ ಸಕ್ರಮಗೊಳಿಸಿಕೊಳ್ಳಲು ಏಪ್ರಿಲ್ 30 ಕೇ ಗಡುವು ನೀಡಲಾಗಿದ್ದು, ರೈತರು, ಶಾಸಕರು ಅವಧಿ ವಿಸ್ತರಿಸುವಂತೆ ಮನವಿ ಮಾಡಿದ ಹಿನ್ನಲೆಯಲ್ಲಿ ಸಕ್ರಮಗೊಳಿಸುವ ಅವಧಿಯನ್ನು ಮೇ 15 ರವರೆಗೆ ವಿಸ್ತರಿಸಲಾಗಿದೆ ಎಂದರು.

ರಾಜ್ಯದಲ್ಲಿ ಸುಮಾರು 2 ಲಕ್ಷ ಅಕ್ರಮ ಸಂಪರ್ಕಗಳಿವೆ ಎಂದು ಅಂದಾಜು ಮಾಡಲಾಗಿದ್ದು, ಈಗಾಗಲೇ 1 ಲಕ್ಷ ರೈತರು ಸಕ್ರಮಗೊಳಿಸಿಕೊಳ್ಳಲು ನೊಂದಾಯಿಸಿಕೊಂಡಿದ್ದಾರೆ ಎಂದ ಇಂಧನ ಸಚಿವರು ಮೇ 15 ರ ಒಳಗಾಗಿ ಅಕ್ರಮ ಸಂಪರ್ಕಗಳನ್ನು ಸಕ್ರಮಗೊಳಿಸಿಕೊಳ್ಳದಿದ್ದರೆ ಅಂತಹ ಅಕ್ರಮ ಸಂಪರ್ಕಗಳಿಗೆ ವಿದ್ಯುತ್ ಸಂಪರ್ಕವನ್ನು ಕಡಿತಗೊಳಿಸಲಾಗುವುದು ಎಂದರು.

ಅಮೇರಿಕಾ ಮೂಲಕ ಆಕ್ಷನ್ / ಮೇಟೋಸ್ಪೋರ್ಟ್ ಕಂಪನಿಯು ಬೆಂಗಳೂರು ಸುತ್ತಮುತ್ತ ಅಂತರರಾಷ್ಟ್ರೀಯ ಮಟ್ಟದ ರೇಸಿಂಗ್ ಟ್ರಾಕ್ ನಿರ್ಮಿಸಲು ಮುಂದೆ ಬಂದಿದ್ದು ಪ್ರಸ್ತಾವನೆ ಸಲ್ಲಿಸಲು ಬಯಸಿದ್ದಾರೆ ಎಂದು ಮಾತನಾಡಿದ ಸಚಿವ ಡಿ.ಕೆ. ಶಿವಕುಮಾರ್, ರಾಮನಗರ–ಕನಕಪುರ–ಬೆಂಗಳೂರಿನ ನೈಸ್ ರಸ್ತೆ ಹಾಗೂ ವಿಮಾನ ನಿಲ್ದಾಣದ ಹತ್ತಿರ ಸುಮಾರು 300 ಎಕರೆ ಭೂಮಿ ನೀಡುವಂತೆ ಪ್ರಸ್ತಾವಿಕವಾಗಿ ಮಾತನಾಡಿದ್ದು,

ಸುಮರು 250 ದಶಲಕ್ಷ ಡಾಲರ್ ಬಂಡವಾಳ ಹೂಡಿಕೆಗೆ ಸಿದ್ದವಾಗಿದ್ದಾರೆ ಇದರಿಂದ ಸ್ಥಳೀಯವಾಗಿ ಮೂರು ಸಾವಿರ ಉದ್ಯೋಗ ಸೃಷ್ಠಿಯಾಗುವ ನಿರೀಕ್ಷೆ ಇದೆ ಎಂದರು.

ರೇಸಿಂಗ್ ಟ್ರಾಕ್ ಜೊತೆಯಲ್ಲಿಯೇ ಬ್ಯಾಸ್ಕೇಟ್ ಬಾಲ್ ಹಾಗೂ ಪುಟ್‌ಬಾಲ್ ಸ್ಟೇಡಿಯಂ ನಿರ್ಮಾಣ ಮಾಡಲು ಪ್ರಸ್ತಾವನೆ ಸಲ್ಲಿಸಿರುವುದಾಗಿ ತಿಳಿಸಿದ್ದು ಪ್ರವಾಸೋದ್ಯಮ ಇಲಾಖೆ ಹಾಗೂ ಮೂಲಭೂತ ಸೌಲಭ್ಯ ಇಲಾಖೆ ಜೊತೆ ಚರ್ಚಿಸಿ ಸರ್ಕಾರದ ವತಿಯಿಂದ ಯಾವ ರೀತಿ ಸಹಕಾರ ನೀಡಬಹುದು ಎಂದು ಮುಂದಿನ ದಿನಗಳಲ್ಲಿ ತೀರ್ಮಾನಿಸಲಾಗುವುದು ಎಂದು ತಿಳಿಸಿದರು.

ಪಹೊ:ಜಿಪಿಆರ್.